ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) :—

ಅ. ಹಾರಂಗಿ ಅಣೆಕಟ್ಟೆಯಲ್ಲಿ ನಾಲೆಗೆ ನೀರು ಬಿಡುವ ಸಲುವಾಗಿ ಹೊಸದಾಗಿ ಯಾವುದೇ ಗೇಟುಗಳನ್ನು ಅಳವಡಿಸಿರುವುದಿಲ್ಲ. ಹಾರಂಗಿ ಡ್ಯಾಂ ವಿಭಾಗದ ಉಗ್ರಾಣದಲ್ಲಿದ್ದ ವೈರ್ ರೋಪ್‌ಗಳನ್ನು ಉಪಯೋಗಿಸಿ ದುರ್ಬಲವಾಗಿದ್ದ ವೈರ್ ರೋಪ್‌ಗಳನ್ನು ಬದಲಾಯಿಸಲಾಗುತ್ತಿದೆ. ಇದುವರೆವಿಗೆ ಯಾವುದೇ ಹಣ ವೆಚ್ಚವಾಗಿರುವುದಿಲ್ಲ.

ಆ. ರಿವರ್ ಸ್ಲೂಯಿಸ್ ಗೇಟುಗಳಿಗೆ ರೋಲರ್ ಅಸೆಂಬ್ಲಿಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ.

ತುಂಗಾ ಮೇಲ್ದಂಡೆ ಯೋಜನೆಗೆ ನಿಗದಿ ಮಾಡಿರುವ ಹಣ.

2096(2702) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಂಗಾ ಮೇಲ್ದಂಡೆ ಯೋಜನೆಗೆ ಒಟ್ಟು ನಿಗದಿಮಾಡಿರುವ ಹಣ ಎಷ್ಟು?

ಆ) ಇದುವರೆವಿಗೂ ಖರ್ಚು ಮಾಡಿರುವ ಹಣ ಎಷ್ಟು?

ಇ) ತುಂಗಾ ಅಣೆಕಟ್ಟು ಗುತ್ತಿಗೆ ಕರಾರಿನಂತೆ ಪೂರ್ಣಗೊಳಿಸಬೇಕಾದ ಅವಧಿ ಯಾವುದು?

ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) :—

ಅ) ತುಂಗಾ ಮೇಲ್ದಂಡೆ ಯೋಜನೆಗೆ 2001-2002ನೇ ಸಾಲಿನ ದರಗಳಂತೆ ರೂ. 915.35 ಕೋಟಿ ಹಣ ಬೇಕಾಗುವುದಾಗಿ ಅಂದಾಜಿಸಲಾಗಿದೆ.

ಆ) ಪ್ರಾರಂಭದಿಂದ ಇದುವರೆವಿಗೂ ಒಟ್ಟು ರೂ.111.17 ಕೋಟಿ ಹಣ ಖರ್ಚು ಮಾಡಲಾಗಿದೆ.

ಇ) ತುಂಗಾ ಮೇಲ್ದಂಡೆ ಯೋಜನೆಯ ಅಣೆಕಟ್ಟು ಕಾಮಗಾರಿಯ ಟೆಂಡರ್ ಕರಾರಿನಂತೆ ಅಣೆಕಟ್ಟೆಯನ್ನು ಫೆಬ್ರವರಿ 2002ರ ವೇಳೆಗೆ ಪೂರ್ಣಗೊಳಿಸಬೇಕಾಗಿದೆ.

ರಾಜ್ಯದಲ್ಲಿರುವ ಜಲಸಂವರ್ಧನೆ ಯೋಜನೆ ಪ್ರಕಾರ ಇರತಕ್ಕ ಸಂಘಟಿತವಾದ ನೀರು ಬಳಕೆದಾರರ ಸಹಕಾರ ಸಂಘಗಳು.

2308(2766) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.